ಕುವೆಂಪು ವಿಶ್ವವಿದ್ಯಾಲಯ

Accredited by NAAC with "A" Grade | 73rd All India Rank in NIRF

ಸಂಖ್ಯೆ : ಕುವಿ/ಪವಿ/ಡಿಎಸ್-1/D248 /2021-22

ರಿಜಿಸ್ಟ್ರಾರ್ (ಮೌಲ್ಯಮಾಪನ) ರವರ ಕಛೇರಿ
ಜ್ಞಾನಸಹ್ಯಾದ್ರಿ ಶಂಕರಘಟ್ಟ – 577451
ಶಿವಮೊಗ್ಗ ಜಿಲ್ಲೆ
ದಿನಾಂಕ: 05-06-2021

## ತಿದ್ದುಪಡಿ ಅಧಿಸೂಚನೆ

ವಿಷಯ : ದೂರಶಿಕ್ಷಣ ವಿದ್ಯಾರ್ಥಿಗಳ "ತೆರೆದ ಪುಸ್ತಕ ಪರೀಕ್ಷೆ" (Open Book Exam) ಯನ್ನು ಮುಂದೂಡುವ ಕುರಿತು.

ಉಲ್ಲೇಖ :
1) ಅಧಿಸೂಚನೆ ಸಂಖ್ಯೆ: ಕುವಿ/ಪವಿ/ಡಿಎಸ್-1/ಡಿ246/2021-22, ದಿನಾಂಕ: 30-05-2021
2) ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 158/ಟಿಎನ್‌ಆರ್ 2020, ದಿನಾಂಕ:03-06-2021
3) ವಿಶ್ವವಿದ್ಯಾಲಯದ ಸುತ್ತೋಲೆ ಸಂಖ್ಯೆ: ಕುವಿ / ಮಾಸನಿ-7 / 395 / 2021-22, ದಿನಾಂಕ:04-06-2021
4) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:04-06-2021

******

ಉಲ್ಲೇಖಿತ (1)ರ ಅಧಿಸೂಚನೆಯನ್ವಯ 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದ ದೂರಶಿಕ್ಷಣದ ಸ್ನಾತಕ ಪದವಿಯ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಹಾಗೂ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ (ಪ್ರಥಮ ಮತ್ತು ದ್ವಿತೀಯ ಆವೃತ್ತಿ) "ತೆರೆದ ಪುಸ್ತಕ ಪರೀಕ್ಷೆ" (Open Book Exam) ಮಾದರಿಯಲ್ಲಿ ಪರೀಕ್ಷೆಗಳನ್ನು ನಡೆಸಲು ಉದ್ದೇಶಿಸಲಾಗಿ, ಸದರಿ ಪರೀಕ್ಷೆಗಳನ್ನು ದಿನಾಂಕ:14-06-2021 ರಿಂದ ಪ್ರಾರಂಭಗೊಂಡು ಹತ್ತು ದಿನಗಳವರೆಗೆ ನಡೆಸಲು ತಿಳಿಸಲಾಗಿದ್ದು, ಈ ಸಂಬಂಧ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳನ್ನು ಸಂಬಂಧಿಸಿದ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳು ವಿಶ್ವವಿದ್ಯಾಲಯದಿಂದ ದಿನಾಂಕ:10-06-2021ರಂದು ಖುದ್ದಾಗಿ ಪಡೆದು, ಸಂಬಂಧಿಸಿದ ಅರ್ಹ ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳನ್ನು ವಿತರಿಸಿ, ಉತ್ತರಿಸಿದ ಉತ್ತರ ಪತ್ರಿಕೆಗಳನ್ನು ಹತ್ತು ದಿನದೊಳಗಾಗಿ ಅಂದರೆ ದಿನಾಂಕ:14-06-2021 ರಿಂದ 23-06-2021 ರ ಅವಧಿಯೊಳಗಾಗಿ ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ Speed Post ಮುಖಾಂತರ ಅಥವಾ ಖುದ್ದಾಗಿ ಮೊಹರು ಮಾಡಿದ ಲಕೋಟೆಯಲ್ಲಿ ತಲುಪಿಸಲು ತಿಳಿಸಲಾಗಿತ್ತು.

ಆದರೆ, ರಾಜ್ಯದೆಲ್ಲೆಡೆ ಕೋವಿಡ್-19 (ಕೊರೊನಾ ವೈರಸ್) ಎರಡನೇ ಅಲೆ ಹೆಚ್ಚಾಗುತ್ತಿರುವುದರಿಂದ ಅದನ್ನು ತಡೆಗಟ್ಟಲು ಉಲ್ಲೇಖಿತ (2)ರಲ್ಲಿ ರಾಜ್ಯ ಸರ್ಕಾರವು ದಿನಾಂಕ: 13-06-2021ರವರೆಗೆ ಲಾಕ್‌ಡೌನ್ ಅವಧಿಯನ್ನು ಮುಂದೂಡಿದ್ದು, ಇದರಂತೆ ಉಲ್ಲೇಖ (3)ರ ವಿಶ್ವವಿದ್ಯಾಲಯದ ಸುತ್ತೋಲೆಯಲ್ಲಿ ದಿನಾಂಕ:07-06-2021 ರಿಂದ 13-06-2021ರವರೆಗೆ ರಜೆಯನ್ನು ವಿಸ್ತರಿಸಲಾಗಿದೆ.

**ಆದ್ದರಿಂದ, ನಿಗದಿ ಪಡಿಸಲಾಗಿದ್ದ ಪರೀಕ್ಷಾ ದಿನಾಂಕ ಹಾಗೂ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಸಂಬಂಧಿಸಿದ ಅಧ್ಯಯನ ಕೇಂದ್ರದ ಸಂಯೋಜನಾಧಿಕಾರಿಗಳು ವಿಶ್ವವಿದ್ಯಾಲಯದಿಂದ ಖುದ್ದಾಗಿ ಪಡೆಯಲು ತಿಳಿಸಲಾಗಿದ್ದ ದಿನಾಂಕವನ್ನು ಮುಂದಿನ ಆದೇಶದ ವರೆಗೆ ಮುಂದೂಡಲಾಗಿದೆ. ಮುಂದಿನ ಕ್ರಮದ ಬಗ್ಗೆ ನಂತರ ತಿಳಿಸಲಾಗುವುದು.**

ಕುಲಸಚಿವರು (ಪರೀಕ್ಷಾಂಗ)

ಕುಲಸಚಿವರು (ಮೌಲ್ಯಮಾಪನ)
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ - 577 451

5/6/21

ಗೆ,

1. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
2. ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಎಲ್ಲಾ ದೂರಶಿಕ್ಷಣ ಅಧ್ಯಯನ ಕೇಂದ್ರಗಳ ಸಂಯೋಜನಾಧಿಕಾರಿಗಳು
3. ಪ್ರಾಂಶುಪಾಲರು, ಸಹ್ಯಾದ್ರಿ ಕಲಾ / ವಿಜ್ಞಾನ / ವಾಣಿಜ್ಯ ಕಾಲೇಜು, ಶಿವಮೊಗ್ಗ
4. ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಕಡೂರು
5. ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು

ಪ್ರತಿಗಳು:

1. ಆಪ್ತ ಕಾರ್ಯಾಲಯ ಮಾನ್ಯ ಕುಲಪತಿಗಳು/ಕುಲಸಚಿವರು/ಕುಲಸಚಿವರು (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
2. ವಿಶ್ವವಿದ್ಯಾಲಯದ ಎಲ್ಲಾ ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ.
3. ಉಪಕುಲಸಚಿವರು/ಸಹಾಯಕ ಕುಲಸಚಿವರು/ಶಾಖಾಧಿಕಾರಿಗಳು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
4. ತಾಂತ್ರಿಕ ಸಹಾಯಕರು, ಕಂಪ್ಯೂಟರ್ (ಪರೀಕ್ಷಾಂಗ) ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
5. ಸಂಯೋಜಕರು, ಹೊರಗುತ್ತಿಗೆ ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾಲಯ ಕೇಂದ್ರಿಯ ಗಣಕಕಾರ್ಯ ಸೌಲಭ್ಯ ಮತ್ತು ಮಾಹಿತಿ ತಂತ್ರಜ್ಞಾನ ಘಟಕ (ಯು.ಸಿ.ಸಿ.ಎಫ್.), ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
7. ಕಛೇರಿ ಪ್ರತಿ.

O/C